2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸೇಷನ್ ಕೇಸ್ ನಂ.191/2025

ಪಿ.ಡಬ್ಲ್ಯೂಃ 1

ಸಿ.ಡಬ್ಲ್ಯೂಃ 1

ಸಾಕ್ಷಿಯ ಹೆಸರುಃ ಶ್ರೀ. ಶೇಖಪ್ಪಾ ಭೀಮಪ್ಪಾ ಬಂಡಿವಡ್ಡರ
ತಂದೆಯ ಹೆಸರುಃ ಭೀಮಪ್ಪಾ ಬಂಡಿವಡ್ಡರ
ವಯಸ್ಸುಃ 27 ವರ್ಷ
ಉದ್ಯೋಗಃ ಕೂಲಿ ಕೆಲಸ
ವಾಸಃ ಹಳೇ ತೇಗೂರ ಧಾರವಾಡ

**ದಿನಾಂಕಃ 09.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಸುರೇಶ ಬಂಡಿವಡ್ಡರ ನನ್ನ ಅಣ್ಣ. ಚಾಸಾಃ 32 ರವರು ಸುರೇಶ ಬಂಡಿವಡ್ಡರ ರವರ ಹೆಂಡತಿ. ನನ್ನ ಅಣ್ಣ, ಅತ್ತಿಗೆ ಹಾಗೂ ಅವರ ಇಬ್ಬರು ಮಕ್ಕಳ ಸಮೇತ ಖಾನಾಪೂರದ ಗಾಂಧಿನಗರದಲ್ಲಿ ಬಾಡಿಗೆ ಮನೆ ಪಡೆದು ವಾಸಿಸುತ್ತಿದ್ದರು. ನನ್ನ ಅಣ್ಣ ರೋಡ ರಸ್ತೆ ನಿರ್ಮಾಣ ಕೆಲಸದಲ್ಲಿ ಕೂಲಿಯಾಗಿ ಕೆಲಸ ಮಾಡುತ್ತಿದ್ದ.

2. ಈ ಪ್ರಕರಣದ ದೂರು ದಾಖಲಾಗುವ 6 ತಿಂಗಳ ಹಿಂದೆಯಿಂದ ನನ್ನ ಅತ್ತಿಗೆ ಚಾಸಾಃ 32 ರವರು ಈ ಪ್ರಕರಣದ 1 ನೇ ಆರೋಪಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದರು. 1 ನೇ ಆರೋಪಿಯು ನನ್ನ ಅಣ್ಣನ ಮನೆಗೆ ಆತ ಇಲ್ಲದಿದ್ದಾಗ ಬಂದು ಹೋಗುವುದನ್ನು ಮಾಡುತ್ತಿದ್ದ. ಈ ವಿಚಾರ ನನ್ನ ಅಣ್ಣನಿಗೆ ತಿಳಿದು 1 ನೇ ಆರೋಪಿಗೆ ನನ್ನ ಮನೆಯ ಬಳಿ ಬರಬೇಡ ಎಂದು 4–5 ಬಾರಿ ಹೇಳಿದ್ದರು. ಆದರೆ ಆತ ಬರುವುದನ್ನು ನಿಲ್ಲಿಸಿರಲಿಲ್ಲ. ಈ ವಿಚಾರವನ್ನು ನನ್ನ ಅಣ್ಣ ಊರಿಗೆ ಬಂದಾಗ ಹಾಗೂ ಫೋನ್ ಮೂಲಕ ತಿಳಿಸಿದ್ದ.

3. ದಿಃ 02.08.2025 ರಂದು ನನ್ನ ಅಣ್ಣ ನನ್ನ ಅತ್ತಿಗೆ ಚಾಸಾಃ 32 ರವರಿಗೆ 1 ನೇ ಆರೋಪಿಯ ಜೊತೆ ಫೋನ್ ನಲ್ಲಿ ಮಾತನಾಡಬೇಡ ಎಂದು ಬೈದಿದ್ದರಿಂದ ಆಕೆ ನನ್ನ ಅಣ್ಣನ ಮೇಲೆ ಸಿಟ್ಟು ಮಾಡಿಕೊಂಡು ಮಕ್ಕಳನ್ನು ಕರೆದುಕೊಂಡು ತವರು ಮನೆಗೆ ಹೋಗುತ್ತೇನೆಂದು ಹೇಳಿ ಹೋಗಿದ್ದಳು. ಆದರೆ ದಿಃ 03.08.2025 ರಂದು ಚಾಸಾಃ 32 ರವರು ನನ್ನ ಅಣ್ಣನಿಗೆ ಬೇರೆಯವರ ಮೊಬೈಲ್ ನಿಂದ ಕರೆ ಮಾಡಿ ನಾನು ನನ್ನ ತವರು ಮನೆಗೆ ಹೋಗಿಲ್ಲ, ಬೆಳಗಾವಿಯ ರೈಲ್ವೆ ನಿಲ್ದಾಣದಲ್ಲಿ ಇದ್ದೇವೆ ಎಂದು ಹೇಳಿದ್ದರಿಂದ ನನ್ನ ಅಣ್ಣ ಹೋಗಿ ಅವರನ್ನು ಕರೆದುಕೊಂಡು ಬಂದಿದ್ದ. ಈ ವಿಚಾರವನ್ನು ನನ್ನ ಅಣ್ಣ ನನಗೂ ತಿಳಿಸಿದ್ದರಿಂದ ನಾನು ಸಹ ಖಾನಾಪೂರಕ್ಕೆ ದಿಃ 03.08.2025 ರಂದು ಹೋಗಿದ್ದೆ.

4. ಆ ದಿನ ಈ ಪ್ರಕರಣದ 2 ನೇ ಆರೋಪಿಯು ನನ್ನ ಅಣ್ಣನಿಗೆ ಈ ವಿಚಾರವನ್ನು ಹಿರಿಯರ ಸಮಕ್ಷಮ ಕುಳಿತು ಬಗೆಹರಿಸಿಕೊಳ್ಳೋಣ ಸಾಯಂಕಾಲ 04.20 ಗಂಟೆಗೆ ನೀನು ಖಾನಾಪೂರದಲ್ಲಿರುವ ಗಾಂಧಿನಗರದಲ್ಲಿರುವ ಹನುಮಂತ ದೇವಸ್ಥಾನಕ್ಕೆ ಬಾ ಎಂದು ಹೇಳಿದ್ದರಿಂದ ನಾನು, ನನ್ನ ಅಣ್ಣ ಸುರೇಶ, ನನ್ನ ಅತ್ತಿಗೆ ಚಾಸಾಃ 32, ಹಿರಿಯರಾದ ಸಾಗರ ಅಷ್ಟೇಕರ, ಹರೀಶ, ಶೀಲವಂತ, ಮಂಗಲ, ಕೇದಾರಿ, ರಾಕೇಶ, ಸುಧಾ, ಅನೀಲ ಬಂಡಿವಡ್ಡರ, ಶಾಂತಮ್ಮಾ, ಲಕ್ಷ್ಮೀ ಹಾಗೂ ಇನ್ನೂ 20–25 ಜನ ಅಲ್ಲಿಗೆ ಹೋಗಿದ್ದೇವು. ಅಲ್ಲಿಗೆ ಈ ಪ್ರಕರಣದ 3 ಜನ ಆರೋಪಿತರು ಸಹ ಬಂದಿದ್ದರು.

5. ಪಂಚಾಯತಿಯಲ್ಲಿ ಹಿರಿಯರು 1 ನೇ ಆರೋಪಿಯನ್ನು ಉದ್ದೇಶಿಸಿ ಅವರ ಮನೆಗೆ ನೀನು ಏಕೆ ಹೋಗುತ್ತಿ ಅದು ಸರಿಯಿಲ್ಲ ಎಂದು ಬೈದರು. ಆಗ ನನ್ನ ಅಣ್ಣ ಸುರೇಶನು ಸಿಟ್ಟಿನಿಂದ 1 ನೇ ಆರೋಪಿಗೆ ಒಂದು ಪೆಟ್ಟು ಕೈಯಿಂದ ಹೊಡೆದನು. ಆಗ ತಳ್ಳಾಟ ಮತ್ತು ದೂಕಾಟ ಶುರುವಾಯಿತು. ಆಗ ಈ ಪ್ರಕರಣದ 1 ಮತ್ತು 3 ಆರೋಪಿತರು ನನ್ನ ಅಣ್ಣನಿಗೆ ಹೊಡೆಬಡೆ ಮಾಡಿ ಕಾಲಿನಿಂದ ಒದೆಯುವುದನ್ನು ಮಾಡುತ್ತಿದ್ದರು. ಆಗ ಈ ಪ್ರಕರಣದ 2 ನೇ ಆರೋಪಿಯು ತಾನು ತಂದಿದ್ದ ಚಾಕುವಿನಿಂದ ನನ್ನ ಅಣ್ಣನ ಹೊಟ್ಟೆಗೆ, ಕುತ್ತಿಗೆಗೆ, ಎದೆಗೆ, ಮುಖಕ್ಕೆ ನನ್ನ ಅಣ್ಣನನ್ನು ಕೊಲೆ ಮಾಡುವ ಉದ್ದೇಶದಿಂದ ಹಿರಿದಿರುತ್ತಾನೆ. ನಮ್ಮ ಅಣ್ಣ ಹಲ್ಲೆಯಿಂದ ಕುಸಿದು ಬಿದ್ದಿದ್ದರಿಂದ ಆರೋಪಿತರು ಅಲ್ಲಿಂದ ಓಡಿ ಹೋದರು. ಆಗ ನನ್ನ ಅಣ್ಣನ ಮೇಲೆ ಬಾಕುವಿನಿಂದ ಹಲ್ಲೆ ಮಾಡುವ ಕಾಲಕ್ಕೆ ಬಿಡಿಸಲು ಹೋದ ಚಾಸಾಃ 30

ಸಾಗರ ಅಷ್ಟೇಕರನ ಕೈಗೂ ಸಹ ಚಾಕುವಿನಿಂದ ಹಲ್ಲೆ ಮಾಡಿರುತ್ತಾನೆ. ಗಾಯಗೊಂಡಿದ್ದ ನನ್ನ ಅಣ್ಣನನ್ನು ಹಾಗೂ ಚಾಸಾಃ 30 ರವರನ್ನು 108 ಅಂಬುಲೆನ್ಸ ಕರೆಯಿಸಿ ಖಾನಾಪೂರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದೇವು. ಅಲ್ಲಿ ನನ್ನ ಅಣ್ಣ ಹಾಗೂ ಚಾಸಾಃ 30 ರವರಿಗೆ ಪ್ರಥಮ ಚಿಕಿತ್ಸೆ ನೀಡಿದರು. ಚಾಸಾಃ 30 ರವರು ಮುಂದಿನ ಚಿಕಿತ್ಸೆಗಾಗಿ ಬೇರೆ ಆಸ್ಪತ್ರೆಗೆ ಹೋದರು. ನನ್ನ ಅಣ್ಣನಿಗೆ ಹೊಟ್ಟೆಯ ಕರುಳು ಹೊರಗೆ ಬಂದು ತೀವ್ರತರವಾದ ಗಾಯಗಳಾಗಿದ್ದರಿಂದ ಆತನಿಗೆ ಹೆಚ್ಚಿನ ಚಿಕಿತ್ಸೆಗಾಗಿ ಬೆಳಗಾವಿಯ ಕೆ.ಎಲ್,ಇ. ಆಸ್ಪತ್ರೆಗೆ ಕಳುಹಿಸಿದರು. ಅದರಂತೆ ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಬರುತ್ತಿದ್ದಾಗ ಬೆಳಗಾವಿಯ ಚನ್ನಮ್ಮಾ ವೃತ್ತದ ಬಳಿ ಬಂದಾಗ ನನ್ನ ಅಣ್ಣನ ಜೀವ ಹೋಗಿರುತ್ತದೆ. ಆದರೂ ಸಹಿತ ಕೆ.ಎಲ್.ಇ. ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವು ಅಲ್ಲಿ ವೈದ್ಯರು ಪರೀಕ್ಷಿಸಿ ಗಾಯಾಳು ಆದಾಗಲೇ ಮೃತ್ಯು ಹೊಂದಿದ್ದಾನೆ ಎಂದು ಹೇಳಿದರು. ನಂತರ ರಾತ್ರಿ 09.30 ವರೆಗೆ ಖಾನಾಪೂರದ ಠಾಣೆಗೆ ಭೇಟಿ ಕೊಟ್ಟು ನಾನೇ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಇದು ನಾನೇ ಈ ಪ್ರಕರಣದಲ್ಲಿ ನೀಡಿದ ದೂರು ಎಂದು ಗುರುತಿಸಿರುತ್ತಾರೆ. ಸದರಿ ದೂರನ್ನು ಈಗ ನಿಪಿಃ 1 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು.

6. ದಿಃ 04.08.2025 ರಂದು ಪೋಲೀಸರು ಕೆ.ಎಲ್.ಇ. ಶವಾಗಾರಕ್ಕೆ ಬಂದು ನನ್ನ ಅಣ್ಣನ ಶವದ ಮೇಲೆ ತನಿಖೆ ಮಾಡಿರುತ್ತಾರೆ. ಆ ಕಾಲಕ್ಕೆ ನಾನೇ ಶವ ತೋರಿಸಿರುತ್ತೇನೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಅದರಲ್ಲಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಇದೇ ನನ್ನ ಅಣ್ಣನ ಶವದ ಮೇಲೆ ಮಾಡಿದ ಶವ ತನಿಖಾ ವರದಿ ಎಂದು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ಈಗ ನಿಪಿಃ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಯಿಂದ 2(ಸಿ) ಎಂದು ಗುರುತಿಸಲಾಯಿತು. ಸದರಿ ಶವ ತನಿಖೆಯನ್ನು ಆ ದಿನ ಮಧ್ಯಾಹ್ನ 12.15 ರಿಂದ 01.15 ರವರೆಗೆ ಮಾಡಿರುತ್ತಾರೆಂದು ಹೇಳುತ್ತಾರೆ. ಸಾಕ್ಷಿಯು ಈಗ 4 ಫೋಟೋಗಳನ್ನು ನೋಡಿ ಶವ ತನಿಖಾ ಕಾಲಕ್ಕೆ ತೆಗೆದ ಫೋಟೋಗಳನ್ನು ಎಂದು ಅದರಲ್ಲಿ ನಾನು, ಪೋಲೀಸರು ಹಾಗೂ ನನ್ನ ಜೊತೆ ಬಂದಿದ್ದ ಇಬ್ಬರು ವ್ಯಕ್ತಿಗಳು ಅಲ್ಲಿದ್ದು ನಾನೇ ಆ ಕಾಲಕ್ಕೆ ಶವವನ್ನು ಗುರುತಿಸಿರುತ್ತೇನೆಂದು ಹೇಳುತ್ತಾರೆ. ಸದರಿ 4 ಫೋಟೋಗಳನ್ನು ಈಗ ಒಟ್ಟಾರೆಯಾಗಿ ನಿಪಿಃ 3 ಎಂದು ಗುರುತಿಸಲಾಯಿತು.

7. ಆ ನಂತರ ಶವವನ್ನು ನನಗೆ ನೀಡಿರುತ್ತಾರೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡಿ ಇದೇ ಶವ ಪಡೆದುಕೂಂಡ ಬಗ್ಗೆ ನಾನು ಬರೆದುಕೊಟ್ಟ ದಾಖಲೆ ಎಂದು ಗುರುತಿಸುತ್ತಾರೆ. ಅದನ್ನು ಈಗ ನಿಪಿಃ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 4(ಎ) ಎಂದು ಗುರುತಿಸಲಾಯಿತು.

8. ಅದೇದಿನ ಪೋಲೀಸರು ಕರೆದುಕೊಂಡು ಹೋಗಿ ಖಾನಾಪೂರದ ಗಾಂಧಿನಗರದಲ್ಲಿರುವ ಹನುಮಂತ ದೇವರ ಗುಡಿಯ ಬಳಿ ಹೋಗಿ ಘಟನಾ ಸ್ಥಳವನ್ನು ಪೋಲೀಸರಿಗೆ ನಾನೇ ತೋರಿಸಿರುತ್ತೇನೆ. ಆ ಕಾಲಕ್ಕೆ ಇಬ್ಬರು ಪಂಚರು ಸಹ ಅಲ್ಲಿದ್ದರು. ಸಾಕ್ಷಿಯು ಒಂದು ದಾಖಲೆಯನ್ನು ನೋಡಿ ಇದೇ ಆ ಕಾಲಕ್ಕೆ ಮಾಡಿದ ಪಂಚನಾಮೆ ಎಂದು ಅದರಲ್ಲಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಸದರಿ ದಾಖಲೆಯನ್ನು ಈಗ ನಿಪಿಃ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 5(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ದಿಃ 04.08.2025 ರ ರಾತ್ರಿ 02.30 ಯಿಂದ 04.00 ಗಂಟೆಯವರೆಗೆ ಮಾಡಿರುತ್ತಾರೆ. ಈ ಸಾಕ್ಷಿಯು 8 ಫೋಟೋಗಳನ್ನು ನೋಡಿ ಇವುಗಳನ್ನು ಅದೇ ಕಾಲಕ್ಕೆ ತೆಗೆದಿದ್ದು ಎಂದು ಹೇಳುತ್ತಾರೆ. ಅದರಲ್ಲಿ ನಾನು, ಪೋಲೀಸರು ಹಾಗೂ ಇಬ್ಬರು ಪಂಚರು ಇದ್ದೇವೆ ಎಂದು ಹೇಳುತ್ತಾರೆ. ಸದರಿ ಫೋಟೋಗಳನ್ನು ಈಗ ಒಟ್ಟಾರೆಯಾಗಿ ನಿಪಿಃ 6 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ರಕ್ತ ಬಿದ್ದಿತ್ತು. 2 ನೇ ಆರೋಪಿಯ ಕನ್ನಡಕ ಬಿದ್ದಿತ್ತು. ನನ್ನ ಅಣ್ಣ ಕೈಗೆ ತೋಟ್ಟಿದ್ದ ಕಡಗ ಅಲ್ಲೇ ಬಿದ್ದಿತ್ತು. ಶರ್ಟನ ಗುಂಡಿಗಳು ಬಿದ್ದಿದ್ದವು ಎಂದು ಹೇಳುತ್ತಾರೆ. ಸ್ಥಳದಲ್ಲಿ ಪೋಲೀಸರು ರಕ್ತದ ಮಾದರಿ ಹಾಗೂ ಸಾದಾ ಮಾದರಿ ಹಾಗೂ ಸ್ಥಳದಲ್ಲಿದ್ದ ಬಿದ್ದಿದ್ದ ವಸ್ತುಗಳನ್ನು ಪೋಲೀಸರು ನಮ್ಮ ಮುಂದೆ ಜಪ್ತು ಮಾಡಿರುತ್ತಾರೆ.

9. ಆ ನಂತರ ನಾನು ಖಾನಾಪೂರ ನ್ಯಾಯಾಲಯದಲ್ಲಿ ಈ ಪ್ರಕರಣದ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು ದಾಖಲೆ ಇದ್ದು ಸಾಕ್ಷಿ ಅದನ್ನು ನೋಡಿ ಇದೇ ನಾನು ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆ ಎಂದು ಗುರುತಿಸುತ್ತಾರೆ.

ಸದರಿ ದಾಖಲೆಯನ್ನು ಈಗ ನಿಪಿಃ 7 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ 7(ಎ) ಮತ್ತು 7(ಬಿ) ಎಂದು ಗುರುತಿಸಲಾಯಿತು.

10. ಪಂಚನಾಮೆ ಕಾಲಕ್ಕೆ ಪೋಲೀಸರು ನನ್ನ ಸಮಕ್ಷಮ ಜಪ್ತು ಮಾಡಿದ ವಸ್ತುಗಳನ್ನು ತೋರಿಸಿದರೆ ಗುರುತಿಸುತ್ತೇನೆ. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಗೆ ತೋರಿಸಿದ್ದು ಅದರ ಮೇಲೆ ಇರುವ ಚೀಟಿಯಲ್ಲಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಅದರಲ್ಲಿ ಒಂದು ಬ್ಯಾಂಡೇಜ್ ಮಾದರಿಯ ತುಂಡು ಇದ್ದು ಅದರಲ್ಲಿ ಸ್ಥಳದಲ್ಲಿ ಸಾದಾ ಮಾದರಿಯನ್ನು ಸಂಗ್ರಹಿಸಿದ್ದು ಸಾಕ್ಷಿ ಗುರುತಿಸುತ್ತಾರೆ. ಅದನ್ನು ಈಗ ಮು.ಮಾ. 1 ಎಂದು ಗುರುತಿಸಲಾಯಿತು.

11. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಗೆ ತೋರಿಸಿದ್ದು ಅದರ ಮೇಲೆ ಇರುವ ಚೀಟಿಯಲ್ಲಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಅದರಲ್ಲಿ ಒಂದು ಬ್ಯಾಂಡೇಜ್ ಮಾದರಿಯ ತುಂಡು ಇದ್ದು ಅದರಲ್ಲಿ ಸ್ಥಳದಲ್ಲಿ ಬಿದ್ದಿದ್ದ ರಕ್ತದ ಮಾದರಿಯನ್ನು ಸಂಗ್ರಹಿಸಿದ್ದು ಸಾಕ್ಷಿ ಗುರುತಿಸುತ್ತಾರೆ. ಅದನ್ನು ಈಗ ಮು.ಮಾ. 2 ಎಂದು ಗುರುತಿಸಲಾಯಿತು.

12. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಗೆ ತೋರಿಸಿದ್ದು ಅದರ ಮೇಲೆ ಇರುವ ಚೀಟಿಯಲ್ಲಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಅದರಲ್ಲಿ ಒಂದು ಬ್ಯಾಂಡೇಜ್ ಮಾದರಿಯ ತುಂಡು ಇದ್ದು ಅದರಲ್ಲಿ ಸ್ಥಳದಲ್ಲಿ ಬಿದ್ದಿದ್ದ ರಕ್ತದ ಮಾದರಿಯನ್ನು ಸಂಗ್ರಹಿಸಿದ್ದು ಸಾಕ್ಷಿ ಗುರುತಿಸುತ್ತಾರೆ. ಅದನ್ನು ಈಗ ಮು.ಮಾ. 3 ಎಂದು ಗುರುತಿಸಲಾಯಿತು.

13. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಗೆ ತೋರಿಸಿದ್ದು ಅದರ ಮೇಲೆ ಇರುವ ಚೀಟಿಯಲ್ಲಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಅದರಲ್ಲಿ ಒಂದು ಬ್ಯಾಂಡೇಜ್ ಮಾದರಿಯ ತುಂಡು ಇದ್ದು

ಅದರಲ್ಲಿ ಸ್ಥಳದಲ್ಲಿ ಬಿದ್ದಿದ್ದ ರಕ್ತದ ಮಾದರಿಯನ್ನು ಸಂಗ್ರಹಿಸಿದ್ದು ಸಾಕ್ಷಿ ಗುರುತಿಸುತ್ತಾರೆ. ಅದನ್ನು ಈಗ ಮು.ಮಾ. 4 ಎಂದು ಗುರುತಿಸಲಾಯಿತು.

14. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಗೆ ತೋರಿಸಿದ್ದು ಅದರ ಮೇಲೆ ಇರುವ ಚೀಟಿಯಲ್ಲಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಅದರಲ್ಲಿ ಒಂದು ಬ್ಯಾಂಡೇಜ್ ಮಾದರಿಯ ತುಂಡು ಇದ್ದು ಅದರಲ್ಲಿ ಸ್ಥಳದಲ್ಲಿ ಬಿದ್ದಿದ್ದ ರಕ್ತದ ಮಾದರಿಯನ್ನು ಸಂಗ್ರಹಿಸಿದ್ದು ಸಾಕ್ಷಿ ಗುರುತಿಸುತ್ತಾರೆ. ಅದನ್ನು ಈಗ ಮು.ಮಾ. 5 ಎಂದು ಗುರುತಿಸಲಾಯಿತು.

15. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಗೆ ತೋರಿಸಿದ್ದು ಅದರ ಮೇಲೆ ಇರುವ ಚೀಟಿಯಲ್ಲಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಅದರಲ್ಲಿ ಒಂದು ಕನ್ನಡಕ ಇದ್ದು ಸಾಕ್ಷಿ ನೋಡಿ ಇದು 2 ನೇ ಆರೋಪಿಗೆ ಸೇರಿದ್ದು ಘಟನಾ ಸ್ಥಳದಿಂದ ಸಂಗ್ರಹಿಸಿದ್ದು ಎಂದು ಗುರುತಿಸುತ್ತಾರೆ. ಅದನ್ನು ಈಗ ಮು.ಮಾ. 6 ಎಂದು ಗುರುತಿಸಲಾಯಿತು.

16. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಗೆ ತೋರಿಸಿದ್ದು ಅದರ ಮೇಲೆ ಇರುವ ಚೀಟಿಯಲ್ಲಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಅದರಲ್ಲಿ ಒಂದು ಸಿಲ್ವರ್ ಬಣ್ಣದ ಕೈ ಕಡಗ ಇದ್ದು ಸಾಕ್ಷಿ ನೋಡಿ ಇದು ನನ್ನ ಅಣ್ಣನದು ಘಟನಾ ಸ್ಥಳದಿಂದ ಸಂಗ್ರಹಿಸಿದ್ದು ಎಂದು ಗುರುತಿಸುತ್ತಾರೆ. ಅದನ್ನು ಈಗ ಮು.ಮಾ. 7 ಎಂದು ಗುರುತಿಸಲಾಯಿತು.

17. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಗೆ ತೋರಿಸಿದ್ದು ಅದರ ಮೇಲೆ ಇರುವ ಚೀಟಿಯಲ್ಲಿ ತನ್ನ ಸಹಿ ಇದೆ ಎಂದು ಗುರುತಿಸುತ್ತಾರೆ. ಅದರಲ್ಲಿ ಒಟ್ಟು 4 ಶರ್ಟನ ಗುಂಡಿಗಳು ಇದ್ದು ಇವುಗಳನ್ನು ಸ್ಥಳದಲ್ಲಿ ಪಂಚನಾಮೆ ಕಾಲಕ್ಕೆ ಜಪ್ತು ಮಾಡಿದ್ದು ಎಂದು ಗುರುತಿಸುತ್ತಾರೆ. ಅವುಗಳನ್ನು ಒಟ್ಟಾಗಿ ಮು.ಮಾ. 8 ಎಂದು ಗುರುತಿಸಲಾಯಿತು.

18. 2 ನೇ ಆರೋಪಿಯು ನನ್ನ ಅಣ್ಣನ ಮೇಲೆ ಹಲ್ಲೆಗೆ ಬಳಸಿದ ಚಾಕುವನ್ನು ಈಗ ನನಗೆ ತೋರಿಸಿದರೆ ಗುರುತಿಸುತ್ತೇನೆಂದು ಹೇಳುತ್ತಾರೆ. ಈಗ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಅರಗಿನಿಂದ ಸೀಲ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು ಮರದ ಹಿಡಿಕೆ ಇರುವ ಸ್ಟೀಲ್ ನ ಬಟನ್ ಚಾಕು ಇದ್ದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದನ್ನು ಈಗ ಮು.ಮಾ. 9 ಎಂದು ಗುರುತಿಸಲಾಯಿತು.

19. ಘಟನಾ ಕಾಲಕ್ಕೆ ನನ್ನ ಅಣ್ಣ ಧರಿಸಿದ್ದ ಬಟ್ಟೆಗಳನ್ನು ಈಗ ತೋರಿಸಿದರೆ ಗುರುತಿಸುತ್ತೇನೆ. ಈಗ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಅರಗಿನಿಂದ ಸೀಲ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು ಸಂಪೂರ್ಣ ರಕ್ತ ಹತ್ತಿದ ಶರ್ಟ ಇದ್ದು ಸಾಕ್ಷಿ ನೋಡಿ ಇದು ಮೂಲ ಬಿಳಿ ಬಣ್ಣದ್ದಾಗಿ ರಕ್ತದಿಂದ ಅದು ಸಂಪೂರ್ಣ ಕೆಂಪಾಗಿದೆ ಇದನ್ನೇ ನನ್ನ ಅಣ್ಣ ಘಟನಾ ಕಾಲಕ್ಕೆ ಧರಿಸಿದ್ದು ಎಂದು ಗುರುತಿಸಿದ್ದರಿಂದ ಅದನ್ನು ಈಗ ಮು.ಮಾ. 10 ಎಂದು ಗುರುತಿಸಲಾಯಿತು.

20. ಈಗ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಅರಗಿನಿಂದ ಸೀಲ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು ಬೂದು ಬಣ್ಣದ ಕಪ್ಪನೆಯ ಬನಿಯನ್ ಇದ್ದು ಇದನ್ನೇ ನನ್ನ ಅಣ್ಣ ಘಟನಾ ಕಾಲಕ್ಕೆ ಧರಿಸಿದ್ದು ಎಂದು ಗುರುತಿಸಿದ್ದರಿಂದ ಅದನ್ನು ಈಗ ಮು.ಮಾ. 11 ಎಂದು ಗುರುತಿಸಲಾಯಿತು.

21. ಈಗ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಅರಗಿನಿಂದ ಸೀಲ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು ನೀಲಿ ಬಣ್ಣದ ಜೆನ್ಸ್ ಪ್ಯಾಂಟ ಇದ್ದು ಸಾಕ್ಷಿ ನೋಡಿ ಇದನ್ನೇ ನನ್ನ ಅಣ್ಣ ಘಟನಾ ಕಾಲಕ್ಕೆ ಧರಿಸಿದ್ದು ಎಂದು ಗುರುತಿಸಿದ್ದರಿಂದ ಅದನ್ನು ಈಗ ಮು.ಮಾ. 12 ಎಂದು ಗುರುತಿಸಲಾಯಿತು.

22. ಈಗ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಅರಗಿನಿಂದ ಸೀಲ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು ಕಪ್ಪನೆಯ ಬರ್ಮೋಡಾ ಇದ್ದು

ಸಾಕ್ಷಿ ನೋಡಿ ಇದನ್ನೇ ನನ್ನ ಅಣ್ಣ ಘಟನಾ ಕಾಲಕ್ಕೆ ಧರಿಸಿದ್ದು ಎಂದು ಗುರುತಿಸಿದ್ದರಿಂದ ಅದನ್ನು ಈಗ ಮು.ಮಾ. 13 ಎಂದು ಗುರುತಿಸಲಾಯಿತು.

23. ಈಗ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಅರಗಿನಿಂದ ಸೀಲ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು ನೀಲಿ ಬಣ್ಣದ ಅಂಡರ್ ವೇರ್ ಇದ್ದು ಸಾಕ್ಷಿ ನೋಡಿ ಇದನ್ನೇ ನನ್ನ ಅಣ್ಣ ಘಟನಾ ಕಾಲಕ್ಕೆ ಧರಿಸಿದ್ದು ಎಂದು ಗುರುತಿಸಿದ್ದರಿಂದ ಅದನ್ನು ಈಗ ಮು.ಮಾ. 14 ಎಂದು ಗುರುತಿಸಲಾಯಿತು.

24. ಈಗ ಅರಗಿನಿಂದ ಸೀಲ್ ಮಾಡಿ ಪ್ಯಾಕ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು ಕಪ್ಪನೆಯ ದಾರ ಇದ್ದು ಸಾಕ್ಷಿ ನೋಡಿ ಇದು ನನ್ನ ಅಣ್ಣ ತನ್ನ ಕೈಗೆ ಧರಿಸಿದ್ದ ದಾರ ಎಂದು ಗುರುತಿಸಿದ್ದರಿಂದ ಅದನ್ನು ಈಗ ಮು.ಮಾ. 15 ಎಂದು ಗುರುತಿಸಲಾಯಿತು.

25. ಈಗ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಅರಗಿನಿಂದ ಸೀಲ್ ಮಾಡಿರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು ಕರ್ಚಿಪ್ ಇದ್ದು ಸಾಕ್ಷಿ ನೋಡಿ ಇದು ಬಿಳಿ ಬಣ್ಣದ್ದಾಗಿ ಅದು ರಕ್ತ ಹತ್ತಿದ್ದರಿಂದ ಅದು ಬೂದು ಬಣ್ಣಕ್ಕೆ ತಿರುಗಿದ್ದು ಎಂದು ಗುರುತಿಸಿದ್ದರಿಂದ ಅದನ್ನು ಈಗ ಮು.ಮಾ. 16 ಎಂದು ಗುರುತಿಸಲಾಯಿತು.

26. ನ್ಯಾಯಾಲಯದ ಮುಂದೆ ದೈಹಿಕವಾಗಿ ಹಾಜರಿರುವ 3 ನೇ ಆರೋಪಿಯನ್ನು ನೋಡಿ ಸಾವಿತ್ರಿ ಎಂದು ಹಾಗೂ ವಿ.ಸಿ. ಮೂಲಕ ಹಾಜರಾಗಿರುವ 1 ಮತ್ತು 2 ನೇ ಆರೋಪಿತರನ್ನು ನೋಡಿ ಇವರುಗಳೇ ಸೇರಿ ನನ್ನ ಅಣ್ಣನನ್ನು ಚಾಕುವಿನಿಂದ ಹಲ್ಲೆ ಮಾಡಿ ಕೊಲೆ ಮಾಡಿದವರು ಎಂದು ಗುರುತಿಸುತ್ತಾರೆ.

27. ಸಾಕ್ಷಿಯು ಈ ಹಂತದಲ್ಲಿ ನನ್ನ ಅಣ್ಣನ ಶವ ತನಿಖೆಯು ರಾತ್ರಿ 12.15 ರಿಂದ 01.15 ರವರೆಗೆ ಕೆ.ಎಲ್.ಇ. ಆಸ್ಪತ್ರೆಯ ಶವಾಗಾರದಲ್ಲಿ ಜರುಗಿತ್ತು. ಆ ನಂತರ ಅದೇರಾತ್ರಿ

02.30 ರಿಂದ 04.30 ರ ನಡುವೆ ಖಾನಾಪೂರದ ಗಾಂಧಿನಗರದಲ್ಲಿರುವ ಹನುಮಂತ ದೇವರ ಗುಡಿಯಲ್ಲಿ ಸ್ಥಳ ಪಂಚನಾಮೆಯಾಗಿತ್ತು ಎಂದು ಗುರುತಿಸುತ್ತಾರೆ.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಲಾಪದ ಅವಧಿ ಮುಗಿದಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನದ ಕಲಾಪದ ಅವಧಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

**ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

28. ಹನುಮಂತ ದೇವರ ಗುಡಿಯಲ್ಲಿ ಸಿಸಿಟಿವಿ ಇದ್ದು ಈ ಪ್ರಕರಣದ ಘಟನೆಯು ಅದರಲ್ಲಿ ದಾಖಲಾಗಿದ್ದು ತನಿಖಾಧಿಕಾರಿಯು ಸದರಿ ದೃಶ್ಯಾವಳಿಗಳನ್ನು ತನಿಖಾ ಕಾಲಕ್ಕೆ ನನಗೆ ತೋರಿಸಿ ಗುರುತಿಸಲು ಹೇಳಿದ್ದರು ಅದರಂತೆ ಗುರುತಿಸಿದ್ದೆ. ಸದರಿ ದೃಶ್ಯಾವಳಿಗಳನ್ನು ಈಗ ನನಗೆ ತೋರಿಸಿದರೆ ಗುರುತಿಸುತ್ತೇನೆ.

29. ಈಗ RFSL Hubli ಯ ಅರಗಿನ ಸೀಲ್ ಇರುವ ಒಂದು ಪ್ಯಾಕೇಟನ್ನು ಮುಕ್ತ ನ್ಯಾಯಾಲಯದಲ್ಲಿ ತೆರೆದಿದ್ದು, ಅದರಲ್ಲಿ ಒಂದು KDM company ಯ fasto altra 32 GB pen drive ಇದ್ದು ಅದನ್ನು ಮುಕ್ತ ನ್ಯಾಯಾಲಯದಲ್ಲಿ ಪ್ರದರ್ಶಿಸಿದ್ದು ಅದರಲ್ಲಿ

ದಿಃ 03.08.2025 ರ 04:41:51 ಸೆಕೆಂಡಿಗೆ ಹನುಮಂತ ದೇವರ ಗುಡಿಗೆ ಆರೋಪಿ 1 ಮತ್ತು 2 ರವರು ಹಾಗೂ ಇತರರು ಬಂದಿರುತ್ತಾರೆಂದು ಅದರಲ್ಲಿ 1 ನೇ ಆರೋಪಿಯು ಕೆಳಗೆ ಕುಳಿತಿದ್ದು ಅವನ ಹಿಂದೆ ನಿಂತಿರುವ ವ್ಯಕ್ತಿಯೇ 2 ನೇ ಆರೋಪಿ ಆತನ ತಂದೆ ಎಂದು ಹಾಗೂ ಈಗ ಚಾಸಾಃ 11 ಲಕ್ಷ್ಮೀ ರಾಕೇಶ ಮುದಗಲ್ ರವರು 1 ನೇ ಆರೋಪಿಯನ್ನು ಉದ್ದೇಶಿಸಿ ನೀನು ಸುರೇಶ ಬಂಡಿವಡ್ಡರ ರವರ ಮನೆಗೆ ಏಕೆ ಹೋಗುತ್ತೀದ್ದಿಯಾ ಎಂದು ಪ್ರಶ್ನೆ ಮಾಡುತ್ತಿದ್ದಾಳೆಂದು ಗುರುತಿಸುತ್ತಾರೆ. ಆಗ ನನ್ನ ಅಣ್ಣನು 1 ನೇ ಆರೋಪಿಯ ಬಳಿ ಬಂದು ನಿನಗೆ ಎಷ್ಟು ಬಾರಿ ಹೇಳುವುದು ನಮ್ಮ ಮನೆಗೆ ಬರಬೇಡ ಎಂದು ಹೇಳಿ ಜೋರಾಗಿ ಅವನ ಮುಖಕ್ಕೆ ಹೊಡೆಯುತ್ತಾನೆಂದು, ಆ ಕಾಲಕ್ಕೆ ಪಂಚಾಯತಿ ಮಾಡಲು ಬಂದಿದ್ದ ಇನ್ನಿಬ್ಬರು 1 ನೇ ಆರೋಪಿಗೆ ಕೈಯಿಂದ ಹೊಡೆಯುತ್ತಾರೆ, ಆ ಕಾಲಕ್ಕೆ ನನ್ನ ಅಣ್ಣನನ್ನು ಬಾಗಿಲು ಕಡೆ ದೂಕಿಕೊಂಡು ಹೋಗಿ ಅಲ್ಲಿ 1 ನೇ ಆರೋಪಿಯು ನನ್ನ ಅಣ್ಣನಿಗೆ ಕಾಲಿನಿಂದ ಒದೆಯುವುದು ಹಾಗೂ ಕೈಯಿಂದ ಹೊಡೆಯುವುದನ್ನು ಮಾಡುತ್ತಿದ್ದಾನೆ, ಆಗ 2 ನೇ ಆರೋಪಿಯು ತನ್ನ ಬಳಿಯಿದ್ದ ಚಾಕುವಿನಿಂದ ನನ್ನ ಅಣ್ಣನ ಮೇಲೇ ಹಲ್ಲೆ ಮಾಡುವುದನ್ನು ಕಾಣಬಹುದು ಎಂದು ಗುರುತಿಸುತ್ತಾರೆ. ಅದಲ್ಲದೇ 2 ನೇ ಆರೋಪಿಯು ನನ್ನ ಅಣ್ಣನಿಗೆ ಹೊಡೆದ ನಂತರ ಸಾಗರ ಅಷ್ಟೇಕರ ರವರು ಆತನನ್ನು ತಡೆಯಲು ಹೋದಾಗ ಆತನ ಮೇಲೂ ಹಲ್ಲೆ ಮಾಡುವುದನ್ನು ದೃಶ್ಯಾವಳಿಯಲ್ಲಿ ಕಾಣಬಹುದು ಎಂದು ಗುರುತಿಸುತ್ತಾರೆ. ಆ ಕಾಲಕ್ಕೆ 3 ನೇ ಆರೋಪಿಯು ಸಹ ಅಲ್ಲಿ ಇದ್ದಾರೆ ಎಂದು ಗುರುತಿಸುತ್ತಾರೆ. 3 ನೇ ಆರೋಪಿಯು ತನ್ನ ಮಗನಿಗೆ ಯಾರೋ ಹೊಡೆಯುತ್ತಿರುವುದನ್ನು ನೋಡಿ ಬಿಡಿಸಿಕೊಳ್ಳಲು ಹೋಗುತ್ತಾಳೆ. ನಂತರ ನನ್ನ ಅಣ್ಣನಿಗೆ ಚಾಕುವಿನಿಂದ ಹಲ್ಲೆ ಮಾಡಿದ ನಂತರ 1 ರಿಂದ 3 ನೇ ಆರೋಪಿತರು ಅಲ್ಲಿಂದ ಹೊರಟು ಹೋಗುತ್ತಾರೆಂದು ಹೇಳುತ್ತಾರೆ. ಆ ಕಾಲಕ್ಕೆ ಚಾಸಾಃ 11 ಹಾಗೂ ಇನ್ನಿಬ್ಬ ಮಹಿಳೆಯರು ನನ್ನ ಅತ್ತಿಗೆ ಚಾಸಾಃ 32 ರವರಿಗೆ ಇದು ಎಲ್ಲಾ ನಿನ್ನಿಂದಲೇ ಆಗಿದ್ದು ಎಂದು ಕೈಯಿಂದ ಹೊಡೆಯುತ್ತಿದ್ದಾರೆ ಆಗ ನಾನು ಮತ್ತು ಚಾಸಾಃ 20 ರವರು ಗಾಯಗೊಂಡಿದ್ದ ನನ್ನ ಅಣ್ಣನನ್ನು ಅಂಬುಲೆನ್ಸ್ ಬಂದಿದ್ದು ಅಲ್ಲಿಗೆ ತೆಗೆದುಕೊಂಡು ಹೋಗುವುದನ್ನು ಕಾಣಬಹುದು ಎಂದು ಹೇಳುತ್ತಾರೆ. ಈಗ ಸದರಿ ಪೆನ್ ಡ್ರೈವ್ ನ್ನು ನಿಪಿಃ 8 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರ ಶ್ರೀ. ಎಂ.ಎಲ್.ಐ. ವಕೀಲರಿಂದಃ**

ಈ ಪ್ರಕರಣದಲ್ಲಿ ಆರೋಪಿತರು ಸಲ್ಲಿಸಿದ ಭಾರತೀಯ ನ್ಯಾಯ ಸುರಕ್ಷಾ ಸಂಹಿತಾ ಕಲಂ 254(3) ರ ಅರ್ಜಿಯನ್ನು ಈ ನ್ಯಾಯಾಲಯವು ಆದಾಗಲೇ ಪುರಸ್ಕರಿಸಿ ಈ ಪ್ರಕರಣದ ಎಲ್ಲಾ ಪ್ರತ್ಯಕ್ಷ ಸಾಕ್ಷಿಗಳ ಮುಖ್ಯ ವಿಚಾರಣೆ ಮುಗಿದ ನಂತರ ಅವರುಗಳ ಪಾಟೀ ಸವಾಲು ಮಾಡಲು ಅವಕಾಶ ನೀಡಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.